# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 308
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 29.01.2026
ಉತ್ತರಿಸುವ ಸಚಿವರು : ಮಾನ್ಯ ಉಪಮುಖ್ಯಮಂತ್ರಿಗಳು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಉಡುಪಿ ಜಿಲ್ಲೆ ವಾರಾಹಿ ಯೋಜನೆಯನ್ನು ಪ್ರಾರಂಭಿಸಿದ ಸಂದರ್ಭದಲ್ಲಿ ಅದರ ಮೂಲ ಉದ್ದೇಶವೇನು; ನಂತರ ಆ ಉದ್ದೇಶದಲ್ಲಿ ಯಾವುದೇ ಮಾರ್ಪಾಡು ಮಾಡಲಾಗಿದೆಯೇ; ಮಾರ್ಪಾಡು ಮಾಡಿದ್ದಲ್ಲಿ ಅದಕ್ಕೆ ಕಾರಣಗಳೇನು; | ಕರ್ನಾಟಕ ವಿದ್ಯುತ್ ನಿಗಮದ ಹೊಸಂಗಡಿಯ ಭೂಗರ್ಭ ಜಲ ವಿದ್ಯುತ್ ಶಕ್ತಿ ಉತ್ಪಾದನಾ ಕೇಂದ್ರದಿಂದ ವಿದ್ಯುತ್ ಉತ್ಪಾದನೆ ಬಳಿಕ ಲಭ್ಯವಾಗುವ 1100 ಕ್ಯೂಸೆಕ್ಸ್ ನೀರನ್ನು ಬಳಸಿಕೊಂಡು, ಸುಮಾರು 16 ಕಿ.ಮೀ. ದೂರದಲ್ಲಿ ಇರುವ ಹೊರಿಯಬ್ಬೆ ಎಂಬಲ್ಲಿ ವಿಯರ್ ನಿರ್ಮಿಸಿ, ಕುಂದಾಪುರ ತಾಲೂಕಿನ 33 ಗ್ರಾಮಗಳು ಹಾಗೂ ಉಡುಪಿ ತಾಲ್ಲೂಕಿನ 35 ಗ್ರಾಮಗಳ ಒಟ್ಟು ಸುಮಾರು 15,702 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸುವ ಉದ್ದೇಶದೊಂದಿಗೆ ವಾರಾಹಿ ನೀರಾವರಿ ಯೋಜನೆಯನ್ನು ರೂಪಿಸಲಾಗಿದೆ. ಸದರಿ ಯೋಜನೆಯ ರೂ.9.43 ಕೋಟಿ ಅಂದಾಜು ಮೊತ್ತಕ್ಕೆ ದಿನಾಂಕ:27.03.1979ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>1980ರಿಂದ 2005ರವರೆಗೆ ಈ ಯೋಜನೆಯಡಿ ವಿದ್ಯುತ್ ಉತ್ಪಾದನೆ ಮಾಡುವ ಸಂಬಂಧ ಚರ್ಚೆಯಾಗಿದ್ದು, ಅರಣ್ಯ ಪ್ರದೇಶವನ್ನು ಮಿತಿಗೊಳಿಸಲು ಕೇಂದ್ರ ಅರಣ್ಯ ಸಲಹಾ ಸಮಿತಿಯು ಶಿಫಾರಸಿನ ಮೇರೆಗೆ ವಿದ್ಯುತ್ ಉತ್ಪಾದನೆ ಉದ್ದೇಶವನ್ನು ಕೈಬಿಟ್ಟು, ಪಿಕ್‌ಅಪ್ ಡ್ಯಾಂ ಬದಲಿಗೆ ಡೈವರ್ಷನ್ ವಿಯರ್ ಅನ್ನು ನಿರ್ಮಿಸಲು ನಿರ್ಧರಿಸಲಾಗಿ, ಅಂತಿಮವಾಗಿ, ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯಿಂದ ಮೇ 2005ರಲ್ಲಿ ತೀರುವಳಿ ದೊರೆತಿರುತ್ತದೆ.<br><br>ತದನಂತರ, ಸದರಿ ಯೋಜನೆಯ ರೂ.569.53 ಕೋಟಿ ಅಂದಾಜು ಮೊತ್ತದ ಪರಿಷ್ಕೃತ ಯೋಜನಾ ವರದಿಗೆ ದಿನಾಂಕ:20.03.2006ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>ಸದರಿ ಯೋಜನೆಯು ಪಶ್ಚಿಮ ಘಟ್ಟದ ಕೆಳಭಾಗ ಮತ್ತು ಕರಾವಳಿ ಪ್ರದೇಶದಲ್ಲಿ ನಿರ್ಮಿಸಲು ಉದ್ದೇಶಿಸಿರುವ ಪ್ರಪ್ರಥಮ ಬೃಹತ್ ನೀರಾವರಿ ಯೋಜನೆಯಾಗಿದ್ದು, ಯೋಜನೆಯ ಅನುಷ್ಠಾನದಲ್ಲಿ ಎದುರಾದ ತಾಂತ್ರಿಕ/ಸ್ಥಳೀಯ ಸಮಸ್ಯೆಗಳ ಇತ್ಯರ್ಥಕ್ಕಾಗಿ ಕಾಲಕಾಲಕ್ಕೆ ತಾಂತ್ರಿಕ ಪರಿಣಿತರ ಸಲಹೆ/ಅಭಿಪ್ರಾಯ ಪಡೆದು, ಸಕ್ಷಮ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ವಿನ್ಯಾಸದಲ್ಲಿ ಬದಲಾವಣೆ, ಹೆಚ್ಚುವರಿ ಸ್ಟ್ರಕ್ಚರ್‌ಗಳ ನಿರ್ಮಾಣ, ಅರಣ್ಯ ಪ್ರದೇಶಗಳಲ್ಲಿ ನಾಲಾ ಪಥದಲ್ಲಿ ಮಾರ್ಪಾಡುಗಳನ್ನು ಮಾಡಲಾಗಿದ್ದರೂ, ಯೋಜನೆಯ ಮೂಲ ಉದ್ದೇಶವಾದ 15,702 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸುವಲ್ಲಿ ಯಾವುದೇ ಮಾರ್ಪಾಡುಗಳನ್ನು ಮಾಡಿಕೊಂಡಿರುವುದಿಲ್ಲ. |
| ಆ) | ವಾರಾಹಿ ಯೋಜನೆಯನ್ನು ಪ್ರಾರಂಭಿಸಿದ ದಿನಾಂಕದಿಂದ ಇದುವರೆಗೆ ಎಷ್ಟು ಬಾರಿ ವಿವರವಾದ ಯೋಜನಾ ವರದಿ (DPR) ತಯಾರಿಸಲಾಗಿದೆ; ತಯಾರಿಸಲಾದ ಡಿಪಿಆರ್‌ಗಳ ಅನುಸಾರವೇ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆಯೇ; ಇಲ್ಲದಿದ್ದಲ್ಲಿ ಅನುಷ್ಠಾನದಲ್ಲಿ ಮಾಡಲಾದ ವ್ಯತ್ಯಾಸಗಳಿಗೆ ಕಾರಣಗಳೇನು; | |
| ಇ) | ವಾರಾಹಿ ಯೋಜನೆಯಿಂದ ವಿದ್ಯುತ್ ಉತ್ಪಾದನೆ ಮಾಡುವ ಉದ್ದೇಶವಿದೆಯೇ; ಅದನ್ನು ಈಗ ಮಾಡಲಾಗಿದೆಯೇ; ಮಾಡಿದ್ದರೆ, ಮಾಡಿರುವವರು ಯಾರು; ಅದಕ್ಕೆ ಸರ್ಕಾರದಿಂದ ವೆಚ್ಚವಾಗಿರುವ ಮೊತ್ತವೆಷ್ಟು; ಅದನ್ನು ಈಗ ನಡೆಸಿಕೊಂಡು ಹೋಗುತ್ತಿರುವವರು | ವಾರಾಹಿ ನೀರಾವರಿ ಯೋಜನೆಯಲ್ಲಿ ಮೂಲ ಅನುಮೋದಿತ ಯೋಜನಾ ವರದಿಯಂತೆ ವಿದ್ಯುತ್ ಉತ್ಪಾದನೆ ಉದ್ದೇಶವನ್ನು ಹೊಂದಿರುವುದಿಲ್ಲ.<br><br>ಕಿರು ಜಲ ವಿದ್ಯುತ್ ಯೋಜನೆ ನಿರ್ಮಿಸಲು ಅವಕಾಶವಿರುವ ಬಗ್ಗೆ, ಖಾಸಗಿ ಕಂಪನಿಗಳು ಅಧ್ಯಯನ ನಡೆಸಿ, ಅವರ ಬಂಡವಾಳ ಹೂಡಿಕೆಯೊಂದಿಗೆ ಕಿರುಜಲ ವಿದ್ಯುತ್ ಯೋಜನೆ ನಿರ್ಮಿಸಲು ಅನೇಕ ಯೋಜನೆಗಳಲ್ಲಿ ಅವಕಾಶ ನೀಡಲಾಗಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಯಾರು; ಸದರಿ ವಿದ್ಯುತ್ ಉತ್ಪಾದಕರು ಸರ್ಕಾರಕ್ಕೆ ಶುಲ್ಕ ಪಾವತಿಸುತ್ತಿದ್ದಾರೆಯೇ; ಪಾವತಿಸಲ್ಪಡುವ ಶುಲ್ಕವೆಷ್ಟು; | ಅದರಂತೆ, ಮೆ\|\| ಶ್ಯಾಮಿಲಿ ಹೈಡಲ್ ಪವರ್ ಪ್ರಾಜೆಕ್ಟ್ ಪ್ರೈವೇಟ್ ಲಿ. ಇವರು ವಾರಾಹಿ ಡೈವರ್ಶನ್ ವಿಯರ್ ಸ್ಥಳದಲ್ಲಿ ಕಿರುಜಲ ವಿದ್ಯುತ್ ಘಟಕ ಸ್ಥಾಪಿಸಲು ಇಂಧನ ಇಲಾಖೆಯು ಆದೇಶ ದಿನಾಂಕ:14.10.2005ರಲ್ಲಿ ಅನುಮೋದಿಸಿರುತ್ತದೆ. |
| ಈ) | ವಿದ್ಯುತ್ ಉತ್ಪಾದನೆ ಕಂಪನಿಗೆ ವಿಧಿಸಿದ ಗುತ್ತಿಗೆ ಕರಾರಿನ ಷರತ್ತುಗಳೇನು; ಯೋಜನೆಯ ಯಾವ ಯಾವ ಸೌಲಭ್ಯಗಳನ್ನು ಗುತ್ತಿಗೆ ಕಂಪನಿಗೆ ನೀಡಲಾಗಿದೆ; ಅದಕ್ಕಾಗಿ ವಿಧಿಸಲಾದ ಶುಲ್ಕಗಳ ವಿವರವೇನು; ವಿದ್ಯುತ್ ಉತ್ಪಾದನೆ ಮಾಡಿದ್ದಲ್ಲಿ ಯಾವ ದಿನಾಂಕದಿಂದ ಎಷ್ಟು ಪ್ರಮಾಣದ ವಿದ್ಯುತ್ ಉತ್ಪಾದಿಸಲಾಗಿದೆ; ಉತ್ಪಾದಿತ ವಿದ್ಯುತ್ತನ್ನು ಯಾರಿಗೆ, ಯಾವ ದರದಲ್ಲಿ ವಿತರಿಸಲಾಗಿದೆ. | ಇಂಧನ ಇಲಾಖೆಯ ಅನುಮೋದನೆಯನ್ವಯ ವಾರಾಹಿ ನೀರಾವರಿ ಯೋಜನೆಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕಿರು ಜಲವಿದ್ಯುತ್ ಯೋಜನೆ ಸ್ಥಾಪಿಸಲು ಷರತ್ತುಗಳನ್ನೊಳಗೊಂಡಂತೆ ಜಲ ಸಂಪನ್ಮೂಲ ಇಲಾಖೆಯಿಂದ ದಿನಾಂಕ:22.09.2006ರಂದು ಅನುಮತಿ ನೀಡಲಾಗಿದ್ದು, ಅದರನ್ವಯ ಮೆ\|\|ಶ್ಯಾಮಿಲಿ ಹೈಡಲ್ ಪವರ್ ಪ್ರಾಜೆಕ್ಟ್ ಲಿಮಿಟೆಡ್ ಇವರೊಂದಿಗೆ ದಿನಾಂಕ:14.02.2008ರಂದು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.2, ವಾರಾಹಿ ಜಲಾಶಯ ಯೋಜನಾ ವಿಭಾಗ, ಸಿದ್ದಾಪುರ ಇವರು ಕರಾರು ಮಾಡಿಕೊಂಡಿರುತ್ತಾರೆ (ಅನುಬಂಧ-1).<br><br>ವಾರಾಹಿ ಡೈವರ್ಶನ್ ವಿಯರ್‌ನಲ್ಲಿ ಹೆಚ್ಚುವರಿಯಾಗಿ ಕಿರು ಜಲ ವಿದ್ಯುತ್ ಯೋಜನೆಗೆ ಸಂಬಂಧಿಸಿದ ಕಾಮಗಾರಿ/ನಿರ್ಮಾಣಕ್ಕಾಗಿ ರೂ.88.35 ಲಕ್ಷ ಮೊತ್ತವನ್ನು ಮೆ\|\|ಶ್ಯಾಮಿಲಿ ಹೈಡಲ್ ಪವರ್ ಪ್ರಾಜೆಕ್ಟ್ ಲಿಮಿಟೆಡ್ ಇವರಿಂದ ಭರಿಸಿಕೊಳ್ಳಲಾಗಿದೆ.<br><br>ಮುಂದುವರೆದು, ವಾರಾಹಿ ನೀರಾವರಿ ಯೋಜನೆಗೆ ಅರಣ್ಯ ಇಲಾಖೆಯಿಂದ ಬಿಡುಗಡೆಯಾದ 129.60 ಹೆಕ್ಟೇರ್ ರಕ್ಷಿತಾರಣ್ಯ ಪ್ರದೇಶದಲ್ಲಿ ಮೆ\|\| ಶ್ಯಾಮಲಿ ಹೈಡಲ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಇವರಿಗೆ 0.74 ಹೆಕ್ಟೇರ್ ಪ್ರದೇಶವನ್ನು 30 ವರ್ಷ ಅವಧಿಗೆ ಲೀಸ್ ಆಧಾರದಲ್ಲಿ ಅರಣ್ಯ ಇಲಾಖೆಯಿಂದ ನೀಡಲಾಗಿದೆ.<br><br>ಮೆ\|\| ಶ್ಯಾಮಿಲಿ ಹೈಡಲ್ ಪ್ರಾಜೆಕ್ಟ್ ಪ್ರೈವೇಟ್ ಲಿಮಿಟೆಡ್ ಯೋಜನೆಯು ದಿನಾಂಕ:21.06.2009ರಂದು ಅನುಷ್ಠಾನಗೊಂಡಿದ್ದು, ದಿನಾಂಕ:14.08.2006ರಂದು MESCOM ನೊಂದಿಗೆ ಪ್ರತಿ ಯೂನಿಟ್‌ಗೆ ರೂ.2.80 ರಂತೆ ವಿದ್ಯುತ್ ಖರೀದಿ ಒಪ್ಪಂದ (PPA) ಮಾಡಿಕೊಳ್ಳಲಾಗಿದ್ದು, ದಿನಾಂಕ:22.06.2029ರವರೆಗೆ ಚಾಲ್ತಿಯಲ್ಲಿರುತ್ತದೆ. ಈ ಯೋಜನೆಯಿಂದ ದಿನಾಂಕ:21.06.2009ರಿಂದ ಒಟ್ಟು 500.15 ಮಿ.ಯು. ವಿದ್ಯುತ್‌ನ್ನು MESCOMಗೆ ಪಡೆಯಲಾಗಿದೆ. |
| ಉ) | ಪ್ರಸ್ತುತ ವಾರಾಹಿ ಯೋಜನೆ ಸ್ಥಗಿತಗೊಂಡಿದೆಯೇ; ಸ್ಥಗಿತಗೊಂಡಿದ್ದಲ್ಲಿ ಅದಕ್ಕೆ ಕಾರಣಗಳೇನು; ವಾರಾಹಿ ಯೋಜನೆಗೆ ಸಂಬಂಧಿಸಿದ ಯಾವುದೇ ದೂರುಗಳ ಆಧಾರದಲ್ಲಿ ಕರ್ನಾಟಕ ಲೋಕಾಯುಕ್ತರಿಂದ ತನಿಖೆ ಕೈಗೊಳ್ಳಲಾಗಿದೆಯೇ; ತನಿಖೆ ವಿವರಗಳೇನು? | ಪ್ರಸ್ತುತ ಅನುಮೋದಿತ ಪರಿಷ್ಕೃತ ಯೋಜನಾ ವರದಿಯನ್ವಯ ಯೋಜನೆಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಪ್ರಸ್ತುತ, ವಾರಾಹಿ ಡೈವರ್ಶನ್ ವಿಯರ್, ವಾರಾಹಿ ಬಲದಂಡೆ ಸಾಮಾನ್ಯ ಕಾಲುವೆ 0.00 ರಿಂದ 18.725 ಕಿ.ಮೀ, ಎಡದಂಡೆ ಕಾಲುವೆ 0.00 ರಿಂದ 43.694 ಕಿ.ಮೀ ಕಾಮಗಾರಿಗಳು ಪೂರ್ಣಗೊಂಡಿದ್ದು, 6155 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಾಗಿದೆ.<br><br>ವಾರಾಹಿ ನೀರಾವರಿ ಯೋಜನೆಯ ಅನುಷ್ಠಾನದಲ್ಲಿನ ವಿಳಂಬ, ಕಳಪೆ ಕಾಮಗಾರಿ ಹಾಗೂ ಭ್ರಷ್ಟಾಚಾರ ನಡೆದಿರುವುದಾಗಿ ಮಾನ್ಯ ಲೋಕಾಯುಕ್ತದಲ್ಲಿ ದಾಖಲಾದ ದೂರಿನ ಬಗ್ಗೆ, ಮಾನ್ಯ ಉಪ ಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(1) ರಡಿ ದಿನಾಂಕ:28.02.2018ರಂದು ಸಲ್ಲಿಸಿದ್ದ ವರದಿಯಲ್ಲಿ ಈ ಪ್ರಕರಣದಲ್ಲಿ ರೂ.100 ಕೋಟಿಗೂ ಅಧಿಕ ಮೊತ್ತದ ಅವ್ಯವಹಾರ ನಡೆದಿರುವುದಾಗಿ ತಿಳಿಸುತ್ತಾ, ಯೋಜನೆಯ ಕಾಮಗಾರಿಗಳನ್ನು ನಿರ್ವಹಿಸಿದ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ವಿರುದ್ಧ ಸಿವಿಲ್ ಹಾಗೂ ಕ್ರಿಮಿನಲ್ ಮೊಕದ್ದಮೆ ದಾಖಲಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಸದರಿ ವಿಷಯವಾಗಿ ಕರ್ನಾಟಕ ನೀರಾವರಿ ನಿಗಮವು ಸಲ್ಲಿಸಿರುವ ವರದಿಯಲ್ಲಿ, ಲೋಕಾಯುಕ್ತ ತನಿಖಾಧಿಕಾರಿಯವರು ಯೋಜನಾ ಪ್ರದೇಶಕ್ಕೆ ಪರಿಶೀಲನೆಗೆ ಆಗಮಿಸಿದ ಸಂದರ್ಭದಲ್ಲಿ ವಿವಿಧ ಕಾಮಗಾರಿಗಳ ಗುಣಮಟ್ಟವನ್ನು ಮತ್ತು ವಿವಿಧ ಕಟ್ಟಡಗಳ ಅಳತೆಗಳು ಕಾಮಗಾರಿ ನಿರ್ಮಾಣದ ಅಳತೆಗಳನ್ನು ದಾಖಲಿಸಲಾಗಿರುವ ಅಳತೆ ಪುಸ್ತಕದ ಅಳತೆಗಳಿಗೆ ತಾಳೆಹೊಂದಿರುವ ಬಗ್ಗೆ ತನಿಖಾ ವರದಿಯಲ್ಲಿ ಉಲ್ಲೇಖಿಸಲಾಗಿರುತ್ತದೆ. ಅಲ್ಲದೇ, ತನಿಖಾ ವರದಿಯಲ್ಲಿ ಯಾವುದೇ ಕಾಮಗಾರಿಯು ಕಳಪೆ ಗುಣಮಟ್ಟ ಹೊಂದಿರುವ ಬಗ್ಗೆ ವರದಿ ಮಾಡಿರುವುದಿಲ್ಲ. ಯೋಜನೆ ಅನುಷ್ಠಾನದ ಸಂದರ್ಭದಲ್ಲಿ ಅಂದಾಜು ಪಟ್ಟಿಯ specificationಗೆ ಅನುಗುಣವಾಗಿ ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಸ್ಥಳದ ನೈಜತೆ, ವಿನ್ಯಾಸ/ತಾಂತ್ರಿಕ ಅವಶ್ಯಕತೆಗನುಗುಣವಾಗಿ ಹೆಚ್ಚುವರಿ ಕಾಮಗಾರಿ ನಿರ್ವಹಿಸಲಾಗಿದ್ದು, ಸಕ್ಷಮ ಪ್ರಾಧಿಕಾರಗಳ ಅಗತ್ಯ ತೀರುವಳಿ/ಅನುಮೋದನೆ ಪಡೆದ ಬಳಿಕವಷ್ಟೆ ಟೆಂಡರ್ ನಿಯಮಾವಳಿಗಳಂತೆ ಗುತ್ತಿಗೆದಾರರಿಗೆ ಹೆಚ್ಚುವರಿ ಕಾಮಗಾರಿಯ ಮೊತ್ತ ಪಾವತಿಸಲಾಗಿರುತ್ತದೆ. ಇದು ನೈಜವಾಗಿ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಅಗತ್ಯ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದ್ದು, ಸದರಿ ಹೆಚ್ಚುವರಿ ಮೊತ್ತವನ್ನು ಸರ್ಕಾರದ ಬೊಕ್ಕಸಕ್ಕೆ ಆರ್ಥಿಕ ನಷ್ಟ ಉಂಟುಮಾಡಿದೆ ಎಂದು ಪರಿಗಣಿಸಲು ಸಾಧ್ಯವಿರುವುದಿಲ್ಲ ಎಂದು ವರದಿ ಮಾಡಿರುತ್ತಾರೆ.<br><br>ಮಾನ್ಯ ಉಪ ಲೋಕಾಯುಕ್ತರ ತನಿಖಾ ವರದಿಯಲ್ಲಿ ಗಮನಿಸಿರುವ/ ಆಕ್ಷೇಪಿಸಿರುವ ಅಂಶಗಳಿಗೆ ಕಂಡಿಕೆವಾರು ಪಾಲನಾ ವರದಿಯನ್ನು ದಾಖಲಾತಿಗಳೊಂದಿಗೆ ಪರಿಶೀಲಿಸಿ, ಕರ್ನಾಟಕ ನೀರಾವರಿ ನಿಗಮದ ತಾಂತ್ರಿಕ ಉಪ ಸಮಿತಿಯು ನೀಡಿರುವ ಶಿಫಾರಸ್ಸಿನನ್ವಯ ವರದಿಯನ್ನು ದಿನಾಂಕ:27.02.2024ರಂದು ಜರುಗಿದ ನಿಗಮದ ನಿರ್ದೇಶಕರ ಮಂಡಳಿಯ 103ನೇ ಸಭೆಯಲ್ಲಿ ಮಂಡಿಸಲಾಗಿರುತ್ತದೆ. ಮಂಡಳಿಯು ತಾಂತ್ರಿಕ ಉಪ ಸಮಿತಿ ಸಭೆಯ ಅಭಿಪ್ರಾಯದಂತೆ ವಸ್ತುನಿಷ್ಟ ವರದಿಯನ್ನು ಸಹಮತಿಸಿ, ಸರ್ಕಾರಕ್ಕೆ ಸಲ್ಲಿಸಲು ಅನುಮೋದಿಸಿರುತ್ತದೆ.<br><br>ಆದರಂತೆ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ಇವರು ಸರ್ಕಾರಕ್ಕೆ ಸಲ್ಲಿಸಿರುವ ವಸ್ತುನಿಷ್ಟ ವರದಿಯನ್ನು ಒಪ್ಪಿ, ಸರ್ಕಾರದ ಹಂತದಲ್ಲಿ ಮುಕ್ತಾಯಗೊಳಿಸಲಾಗಿರುತ್ತದೆ. ಈ ಮಾಹಿತಿ/ವರದಿಯನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(2)ರಡಿ ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ದಿನಾಂಕ:26.07.2024ರಂದು ಸಲ್ಲಿಸಲಾಗಿರುತ್ತದೆ. |

**ಜಸಂಇ 17 ಎಂಎಲ್ಎ 2026**

**(ಡಿ.ಕೆ. ಶಿವಕುಮಾರ್)**
**ಉಪ ಮುಖ್ಯಮಂತ್ರಿ**